ನಿಂತದ್ದು ಗೊತ್ತಾಗಿ, 'ಅಮ್ಮಾ...' ಎಂದು ಅಳಲು ಶುರುಮಾಡಿದರೆ, ಆಕೆ ಪುನಃ ಒಂದೆರಡು ಗಂಟೆ ನಿಂತು ಅವನನ್ನು ರಮಿಸಿ, ಸಮಾಧಾನಪಡಿಸಿ, ಅವನ ಕಣ್ಣುತಪ್ಪಿಸಿ ಹೋಗಬೇಕಾಗುತ್ತಿತ್ತು. ಅದೊಂದು ಮಹಾಸಾಹಸವೇ.

ಅಳುವ ಮಗನನ್ನು ಹೇಗೋ ಸಮಾಧಾನಿಸಿ ಬಂದರೂ, ಇಲ್ಲಿ ಒಬ್ಬಂಟಿಯಾಗಿ ಕೊರಗುತ್ತಿದ್ದ ಮಧುವಿನ ಮನಸ್ಸನ್ನು ಸಮಾಧಾನ ಪಡಿಸುವವರು ಯಾರಿದ್ದಾರೆ? ಆಕೆಯಂತೂ ಅಸಮಾಧಾನದ ಕುದಿಯಲ್ಲೇ ದಿನ ದೂಡುತ್ತಿದ್ದಳು. ಪುನಃ ಊರಿಗೆ ಹೊರಡುವ ವಾರಾಂತ್ಯಕ್ಕೆ ಕಾಯುತ್ತಾ ಯಾಂತ್ರಿಕವಾಗಿ ಕೆಲಸ ಸಾಗಿಸುತ್ತಿದ್ದಳು. ಒಮ್ಮೊಮ್ಮೆ 'ಯಾವ ಪುರುಷಾರ್ಥ ಸಾಧನೆಗೆ ತಾನೊಬ್ಬಳೇ ಇಲ್ಲಿರುವೆ? ನನ್ನ ದುಡಿಮೆಗೆ ಯಾರೂ ಕೈ ಚಾಚುತ್ತಿಲ್ಲವಲ್ಲ! ಗಂಡ, ಮಗು, ಮನೆಮಂದಿಯನ್ನು ಬಿಟ್ಟುಬಂದು ನಾನೊಬ್ಬಳೇ ಇಲ್ಲಿದ್ದುಕೊಂಡು ಒಂಟಿಯಾಗಿ ಸಾಧಿಸುತ್ತಿರುವುದು ಏನು? ನಾನು ಯಾರನ್ನಾದರೂ ಮೆಚ್ಚಿಸಬೇಕಾ? ಅಥವಾ ಹೀಗೆ ಬದುಕುತ್ತಿರುವುದಕ್ಕೆ ಏನಾದರೂ ನನಗೆ ವಿಶೇಷ ಕಿರೀಟ–ಗೌರವ ಕೊಡುತ್ತಾರ?' ಹೀಗೆಲ್ಲಾ ಯೋಚಿಸುತ್ತಿದ್ದಳು. ಆದರೆ, ಸರಕಾರಿ ಕೆಲಸ ತೊರೆಯುವ ವಿಚಾರ ಬಂದಾಗ ಮಾತ್ರ ಮಧುವಿನ ಮನಸ್ಸು ವಿಚಲಿತವಾಗುತ್ತಿರಲಿಲ್ಲ.

'ಮುಂದಿನ ಒಂದು ವಾರ ಪೂರ್ತಿ ತಮಿಳುನಾಡು ಪ್ರವಾಸ ಹೋಗ್ತಿದ್ದೀನಿ. ನೀವು ಬರ್ತೀರಾ ಮಧೂ ಅವರೇ? ಒಂದೆರಡು ಸೀಟು ಖಾಲಿ ಇದೆ ಅಂತ ಟ್ರಾವೆಲ್ ಏಜೆನ್ಸಿಯವರು ಹೇಳ್ತಿದ್ರು. ನಿಮಗೂ ಸೀಟ್ ರಿಸರ್ವ್ ಮಾಡಿಸಲಾ?' ಎಂದು ತನ್ನೊಡನೆ ಹಾಸ್ಟೆಲ್ ರೂಂ ಹಂಚಿಕೊಂಡಿದ್ದ ಲೇಬರ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸಮಾಡುತ್ತಿದ್ದ ಪ್ರತಿಭಾ ಕೇಳಿದಾಗ ಮಧುವಿಗೆ ಆಶ್ಚರ್ಯವಾಯ್ತು. 'ಏನ್ರೀ ಪ್ರತಿಭಾ... ಒಂದು ವಾರ ರಜೆ ಹಾಕ್ತಿದ್ದೀರಾ...? ಅಷ್ಟು ದಿನಕ್ಕೆ ಲೀವ್ ಸ್ಯಾಂಕ್ಷನ್ ಆಯ್ತಾ? ನಮ್ಮ ಆಫೀಸಲ್ಲಿ ಲೀವ್ ಸಿಗೋದು ಡೌಟು' ಎಂದಳು. 'ಮಧು, ನೀವು ಕ್ಯಾಲೆಂಡರ್ ನೋಡಿಲ್ಲ ಅನ್ಸುತ್ತೆ. ಮುಂದಿನ ವಾರದಲ್ಲಿ ಮಂಗಳವಾರ ಮಾತ್ರ ವರ್ಕಿಂಗ್ ಡೇ. ಸೋಮವಾರ ಒಂದು ಆರ್.ಎಚ್. ಇದೆ. ಅದರ ಜೊತೆಗೆ ಮಂಗಳವಾರ ಒಂದು ಕ್ಯಾಷುವಲ್ ಲೀವ್ ಹಾಕಿಕೊಂಡರೆ, ಬುಧವಾರದಿಂದ ಶನಿವಾರದವರೆಗೂ ನಾಲ್ಕು ದಿನ ಕಂಟಿನ್ಯುಯಸ್ಸಾಗಿ ಸರಕಾರಾನೇ ರಜೆಗಳನ್ನು ಕೊಟ್ಟಿದೆ ನೋಡಿ. ಬರಾಬರಿ ಒಂದು ವಾರ ರಜೆ ಸಿಗುತ್ತೆ ರೀ. ನೀವು ಪ್ರತೀವಾರ ಊರಿಗೆ ಓಡ್ಬಿಡ್ತೀರಲ್ಲ... ಈ ಸಲ ನಂಜೊತೆ ಮಧುರೆ, ಪಾಂಡಿಚೇರಿ, ಕನ್ಯಾಕುಮಾರಿ ಎಲ್ಲಾ ನೋಡೋಕೆ ಬಂದ್ಬಿಡಿ. ಊರಿಗೆ ಮುಂದಿನವಾರ ಹೋಗಬಹುದು' ಎಂದರು.

ಆದರೆ ಒಂದು ವಾರದಷ್ಟು ಸುದೀರ್ಘ ರಜೆಯನ್ನು ಮುದ್ದು ಮಗನೊಡನೆ ಕಳೆಯದೆ ಪ್ರವಾಸ ಹೋಗಲು ಮಧು ಮನಸ್ಸು ಒಪ್ಪಲಿಲ್ಲ. 'ಸ್ಸಾರಿ ಪ್ರತಿಭಾ, ನಿಮ್ಮೊಡನೆ ಪ್ರವಾಸಕ್ಕೆ ಬರೋಲ್ಲ. ಆದರೆ ರಜೆಗಳ ಮಾಹಿತಿ ಕೊಟ್ಟಿದ್ದಕ್ಕೆ ನಿಮಗೆ ತುಂಬಾ ಥ್ಯಾಂಕ್ಸ್. ರಜೆ ಹಾಕ್ತೇನೆ. ಸ್ಯಾಂಕ್ಷನ್ ಆದ್ರೆ ಊರಿಗೆ ಹೋಗಿ ಮಗನೊಡನೆ ಒಂದು ವಾರ ಇರ್ತೇನೆ' ಎಂದು ಹೇಳಿ ಲೀವ್ ಲೆಟರ್ ಬರೆಯಲು ಕುಳಿತಳು.

ಮಧುವಿನ ಅದೃಷ್ಟ ಒಂದು ವಾರ ಮುಂಚೆಯೇ ಲೀವ್ ಸ್ಯಾಂಕ್ಷನ್ ಆಯ್ತು. ಆದರೆ ಇದೇ ಸುದೀರ್ಘ ರಜೆ ಆಕೆಯ ಬಾಳಿನ ತಿರುವಿಗೆ ಕಾರಣವಾಗಬಹುದು ಎನ್ನುವ ಕಲ್ಪನೆ ಕೂಡ ಆಕೆಗೆ ಇರಲಿಲ್ಲ.

ಊರಿನಲ್ಲಿ ಮಗನೊಡನೆ ವಾರಗಟ್ಟಲೆ ಸಂತಸ ಪಟ್ಟಿದ್ದು... ಪ್ರಭುವಿನೊಡನೆ, ಹೂ ಬಿಟ್ಟು ಅರಳಿ ಘಮಘಮಿಸುವ ತೋಟ ಗದ್ದೆಗಳಲ್ಲಿ ತಿರುಗಾಡಿದ್ದು, ಕಂಗಳಿಗೆ ತುಂಬಿದ ಹಸಿರು... ಫಲವತ್ತಾದ ಮಣ್ಣಿನ ಗಮಲು... ತಂಪು ಎಳನೀರು... ಕೃಷಿ ಹೊಂಡದ ನೀರು... ಹೊಸದಾಗಿ ಚಂದ್ರಿಕೆ ತಂದು ರೇಷ್ಮೆ ಹುಳು ಸಾಕುವ, ಜೊತೆಗೆ ಜೇನು ಕೃಷಿ ಮಾಡುತ್ತಿರುವ ಗಂಡನ ಹುಮ್ಮಸ್ಸು... ಅತ್ತೆ ಮಾವನವರ ಅನ್ಯೋನ್ಯ ದಾಂಪತ್ಯ ನೋಡಿ ಮಧು ಮನಸ್ಸು ಅರಳುವ ಬದಲು ನರಳಿತು. 'ಕೇವಲ ಸರಕಾರಿ ನೌಕರಿ ಪಡೆದಿರುವುದೇ ತನ್ನ ಸಾಧನೆಯಾ? ಇಷ್ಟು ಚೆಂದದ ಸಂಸಾರ ಬಿಟ್ಟು ತಾನೊಬ್ಬಳೇ ಅಲ್ಲಿದ್ದು ಒಂಟಿಯಾಗಿ ಸಾಧಿಸುತ್ತಿರುವುದು ಏನು? ವರ್ಗಾವಣೆ ಇಲ್ಲದ ಉದ್ಯೋಗ, ಬದಲಾವಣೆ ಇಲ್ಲದ ಕೆಲಸ, ಇಲ್ಲಿ ಎಷ್ಟು ವೈವಿಧ್ಯಮಯವಾದ ಬದುಕಿದೆ. ತಾನು ಕೆಲಸ ಬಿಟ್ಟರೆ ಆಗುವ ನಷ್ಟವೇನು? ಕೃಷಿಯಲ್ಲಿ ತೊಡಗಬಹುದು. ಪ್ರಭು ಸಹ ಬಾಯ್ಬಿಟ್ಟು ಹೇಳದಿದ್ದರೂ ನನ್ನ ಇರುವಿಕೆಯನ್ನು ಎಷ್ಟು ಸಂಭ್ರಮಿಸುತ್ತಾರೆ! ಚಿನ್ಮಯಿ ಅಂತೂ ನಾನಿಲ್ಲಿ ಎರಡು ದಿನ ಹೆಚ್ಚಿಗೆ ಇರುವುದಕ್ಕೇ ಅದೆಷ್ಟು ಚೆನ್ನಾದ ಗೆಲುವಿನ ಕಳೆ ತುಂಬಿಕೊಂಡಿದ್ದಾನೆ! ನಾನಾದರೂ ಅಷ್ಟೆತಾನೆ, ನಗರದ ಆಲಸ್ಯದಿಂದ ವಿಮುಖಳಾಗಿದ್ದೇನೆ. ಇಲ್ಲಿ ದಿನವಿಡೀ ಮಾಡಿದರೂ ಮುಗಿಯಲಾರದಷ್ಟು ಕೆಲಸಗಳಿವೆ. ವಯಸ್ಸಾದ ಅತ್ತೆಮಾವನವರ ಆರೈಕೆಯನ್ನು ನಾನಲ್ಲದೇ ಇನ್ನಾರು ಮಾಡಬೇಕು. ನನ್ನ ನಿಜವಾದ ಬದುಕು ಇದೇ... ಹೌದು ಇದೇ. ಇನ್ನಾದರೂ ನಾನೊಂದು ಗಟ್ಟಿಯಾದ ನಿರ್ಧಾರಕ್ಕೆ ಬರಬೇಕು' – ಮಧು ರಜೆ ಮುಗಿಸಿ ಊರಿನಿಂದ ಹೊರಡುವ ಹಿಂದಿನ ರಾತ್ರಿ ಗಟ್ಟಿಯಾಗಿ ತಬ್ಬಿ ಮಲಗಿದ್ದ ಮಗನ ತೋಳುಗಳನ್ನು ಬಿಡಿಸಿಕೊಳ್ಳಲು ಮನಸ್ಸು ಮಾಡದೇ ಹೀಗೆಲ್ಲಾ ಯೋಚಿಸುತ್ತಿದ್ದಳು.

ಆದರೆ ಊರಿನಲ್ಲಿರುವಾಗ ಗೊತ್ತಾಗದಂತೆ ಓಡಿಹೋದ ರಜೆಗಳು, ಕಚೇರಿಯಲ್ಲಿ ತನಗಾಗಿ ಕಾದಿರಬಹುದಾದ ಕೆಲಸದ ರಾಶಿಯನ್ನು ಮಧುವಿಗೆ ನೆನಪಿಸಲಿಲ್ಲ. ಹೊರಡಲೇ ಬೇಕಾದ ಅನಿವಾರ್ಯತೆಯಿಂದ ಬೆಂಗಳೂರಿಗೆ ಮರಳಿದ್ದಳು. ಊರಿನಿಂದ ವಾಪಸ್ಸಾಗಿ ವಾರ ಕಳೆಯುತ್ತಾ ಬಂದರೂ ಮಧುವಿನ ಮನಸ್ಸು ಅಲ್ಲಿ ಕಳೆದ ದಿನಗಳನ್ನು ಮರಳಿ ಮರಳಿ ನೆನಪಿಸುತ್ತಿತ್ತು. ಗಂಡನ ಹಿತಸಾಂಗತ್ಯ, ಪ್ರೀತಿಯ ಮಗನ ಮುದ್ದುಗರೆತ, ಹಿರಿಯರ ಅಕ್ಕರೆಯನ್ನು ಸದಾ ಪಡೆಯುತ್ತಿರಬೇಕೆಂದು ಮನಸ್ಸು ಹಂಬಲಿಸುತ್ತಿತ್ತು.

ಬೆಳಗ್ಗಿನಂತೆಯೇ ಸಂಜೆ ಕೂಡ ಹಾಸ್ಟೆಲ್ಲಿಗೆ ಮರಳುವಾಗ ಟ್ರಾಫಿಕ್ಕಿನ ಕಿರಿಕಿರಿ ಇತ್ತು. ಇಡೀ ದಿನದ ಟ್ರಾಫಿಕ್ಕಿನ ಕಿರಿಕಿರಿಯಲ್ಲೇ ತೊಯ್ದಾಡುತ್ತಾ ಸಂಜೆ ಹಾಸ್ಟೆಲ್ಲಿಗೆ ಮರಳಿದ ಮಧುವಿನ ಮನಸ್ಥಿತಿ ಸರಿ ಇರಲಿಲ್ಲ.

ರಾತ್ರಿ ಫೋನ್ ಮಾಡಿದ್ದ ಪ್ರಭು. ತಾನು 'ಸಹಜ ಕೃಷಿ' ಮಾಡಿ ಒಂದೆಕರೆಯಲ್ಲಿ ನೆಟ್ಟ ಮಾವಿನ ಮರಗಳು ಫಲ ಬಿಡಲು ತಯಾರಾಗಿರುವ ವಿಚಾರವನ್ನು ತಿಳಿಸಿದಾಗಲೇ ಮಧು ಮನಸ್ಸು ಏನೋ ನೆನೆದುಕೊಂಡು ಹರ್ಷಿಸಿತು. ನಾಳೆ ಬೆಳಿಗ್ಗೆಯೇ ಪಕ್ಕದ ಮೆಡಿಕಲ್ ಶಾಪ್‌ಗೆ ಹೋಗಿ ಪ್ರೆಗ್ನೆನ್ಸಿ ಕನ್ಫರ್ಮೇಷನ್ ಕಿಟ್ ತಂದು ಪರೀಕ್ಷಿಸಿ ಮತ್ತೊಮ್ಮೆ ಖಚಿತಪಡಿಸಿಕೊಳ್ಳುವೆ ಎಂದುಕೊಳ್ಳುತ್ತಾ... ತನ್ನೊಡಲಿನಲ್ಲಿರಬಹುದಾದ 'ಹೊಸ ಫಸಲಿನ' ಸುದ್ದಿಯನ್ನು ಊರಿಗೆ ಹೋಗಿಯೇ ತಿಳಿಸಲು ನಿರ್ಧರಿಸಿ ರಾಜೀನಾಮೆ ಪತ್ರ ಬರೆಯಲು ಮಧ್ಯ ರಾತ್ರಿ ಎದ್ದು ಕುಳಿತಳು. ■

